**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 03.06.2026**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ** .

(ಸಾಕ್ಷಿಯು ತನಗೆ ಹಿಂದಿ ಇಂಗ್ಲಿಷ್ ಬಿಟ್ಟರೆ ಕನ್ನಡ ಮಾತನಾಡಲು ಬರುವುದಿಲ್ಲ ಆದ್ದರಿಂದ ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಪಾಟೀಸವಾಲು ಮಾಡಬೇಕೆಂದು ಕೇಳಿರುತ್ತಾರೆ. ವಾದಿ ಪರ ವಕಿಪಲರು ತಮಗೆ ಹಿಂದಿ ಭಾಷೆ ಮಾತನಾಡಲು ಬರುವುದಿಲ್ಲ, ಕನ್ನಡ ಅಥವಾ ಇಂಗ್ಲಿಷ್ ನಲ್ಲಿ ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸಾಕ್ಷಿ ತನಗೆ ಹಿಂದಿ ಭಾಷೆಯಲ್ಲಿ ಕೇಳಬೇಕೆಂದು ಹೇಳಿದ್ದರಿಂದ ಉಭಯಪಕ್ಷಗಾರರ ಹೇಳಿಕೆಯ ಮೇರೆಗೆ ಶ್ರೀ ಕೆ ವಿ ವೈ ವಕೀಲರನ್ನು ಸಾಕ್ಷಿಗೆ ಹಿಂದಿಯಲ್ಲಿ ಕೇಳುವ ಪ್ರಶ್ನೆಗಳನ್ನು ಮತ್ತು ಸಾಕ್ಷಿಯು ಉತ್ತರಸಿದ್ದನ್ನು ನ್ಯಾಯಾಲಯದ ಭಾಷೆಯಾದ ಕನ್ನಡಕ್ಕೆ ತರ್ಜುಮೆ ಮಾಡಲು ಅನುವಾದಕರಾಗಿ ನೇಮಿಸಲಾಗಿದೆ)

ನನ್ನ ಹೆಸರು ಸಂಜಯ್ ಕುಮಾರ್ ಗೋಯಲ್. ನನಗೆ ವಿಶೇಷ ಅಧಿಕಾರ ಪತ್ರವನ್ನು ನೀಡಿದವರ ಹೆಸರು ಶಶಾಂಕ್ ಕುಮಾರ್ ಗುಪ್ತ. ನ್ಯಾಯಾಲಯಕ್ಕೆ ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿರುವ ಸಹಿ ಶಶಾಂಕ್ ಕುಮಾರ್ ಗುಪ್ತ ರವರದ್ದು. ಆ ಹೇಳಿಕೆಯನ್ನು ಶಶಾಂಕ್ ಕುಮಾರ್ ಗುಪ್ತರವರೇ ಮಾಹಿತಿ ಕೊಟ್ಟದ್ದು ಎಂದರೆ ಸರಿ. ಆದರೆ ನನಗೆ ಲಿಖಿತ ಹೇಳಿಕೆಯಲ್ಲಿ ಹೇಳಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತನ್ನ ಸಮಕ್ಷಮ ಆ ಹೇಳಿಕೆಯ ಮಾಹಿತಿಯನ್ನು ನೀಡಿರುವುದು ಎನ್ನುತ್ತಾರೆ. ಆ ಮಾಹಿತಿಯನ್ನು ಗಾಜಿಯಾಬಾದ್ ನಲ್ಲಿ ನೀಡಿರುತ್ತಾರೆ. ಆ ಮಾಹಿತಿಯನ್ನು ನೀಡುವಾಗ ನಮ್ಮ ಪರವಾಗಿ ಇಲ್ಲಿ ಹಾಜರಿರುವ ವಕೀಲರು ಹಾಜರಿರಲಿಲ್ಲ ಎಂದರೆ ಸಾಕ್ಷಿಯು ಸದರಿ ವಕೀಲರು ಕರಡು ಹೇಳಿಕೆಯನ್ನು ಕಳುಹಿಸಿದ್ದರು ಅದನ್ನು ನಾವು ಪರಿಶೀಲಿಸಿ ಒಪ್ಪಿಗೆ ನೀಡಿದೆವು ಎನ್ನುತ್ತಾರೆ.

2.ವಾದಿಯನ್ನು ನಾನು ನ್ಯಾಯಾಲಯದಲ್ಲಿ ನೋಡಿರುವುದು ಬಿಟ್ಟರೆ ಹೊರಗಡೆ ಎಲ್ಲೂ ನೋಡಿಲ್ಲ ಎಂದರೆ ನಿಜ. ಆದ್ದರಿಂದ ನನಗೆ ವಾದಿ ಮತ್ತು ಶಶಾಂಕ್ ಕುಮಾರ್ ಗುಪ್ತ ರವರ ನಡುವೆ ಏನು ವ್ಯವಹಾರ ನಡೆದಿದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಗೊತ್ತು ಏಕೆಂದರೆ ವಾದಿಯ ಅಕೌಂಟ್ ನ್ನು ನಾನು ರೆಗ್ಯುಲರ್ ಆಗಿ ಪರಿಶೀಲಿಸುತ್ತಾ ಇರುತ್ತೇನೆ ಆದ್ದರಿಂದ ಗೊತ್ತು ಎನ್ನುತ್ತಾರೆ. ಅಕೌಂಟ್ ನ್ನು ಪರಿಶೀಲಿಸಿರುವ ಮೂಲಕ ನನಗೆ ಅವರ ನಡುವಿನ ವ್ಯವಹಾರದ ಬಗ್ಗೆ ಗೊತ್ತು ಎಂದು

ಹೇಳುತ್ತಿದ್ದೇನೆಯೇ ವಿನಃ ವೈಯಕ್ತಿಕವಾಗಿ ಅವರ ನಡುವಿನ ವ್ಯವಹಾರದ ಬಗ್ಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಮತ್ತು ಶಶಾಂಕ್ ಕುಮಾರ್ ಗುಪ್ತ ರವರು ಜೊತೆಯಲ್ಲಿರುವಾಗ ಶಶಾಂಕ್ ಕುಮಾರ್ ಗುಪ್ತ ರವರು ವಾದಿಯ ಜೊತೆ ಮಾತನಾಡುತ್ತಿರುವಾಗ ಕೇಳಿಕೊಂಡಿರುತ್ತೇನೆ ಮತ್ತು ಶಶಾಂಕ್ ಕುಮಾರ್ ಗುಪ್ತ ರವರು ಕೂಡ ಆ ಬಗ್ಗೆ ನನ್ನಲ್ಲಿ ಹೇಳುತ್ತಿದ್ದರು ಎನ್ನುತ್ತಾರೆ. ನಾನು ಶಶಾಂಕ್ ಕುಮಾರ್ ಗುಪ್ತ ರವರ ಜೊತೆ ದಿನದ 10-11 ಗಂಟೆ ಕೆಲಸದ ಸಮಯದಲ್ಲಿ ಜೊತೆಯಲ್ಲೇ ಇರುತ್ತಿದ್ದೆನು. ಕೆಲಸದ ಸಮಯಮುಗಿದ ನಂತರ ವಾದಿ ಮತ್ತು ಪ್ರತಿವಾದಿಯರ ನಡುವೆಏನು ಮಾತುಕತೆ ನಡೆಯುತ್ತಿತ್ತು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಮಾರನೇ ದಿನ ಶಶಾಂಕ್ ಕುಮಾರ್ ಗುಪ್ತ ರವರು ನಡೆದ ವಿಚಾರವನ್ನು ನನಗೆ ಹೇಳುತ್ತಿದ್ದರು, ಆಗ ಗೊತ್ತಾಗುತ್ತಿತ್ತು ಎನ್ನುತ್ತಾರೆ.

3.ನಾವು ವಾದಿಯಿಂದ ಸುಮಾರು 26ಕೋಟಿ ರೂಪಾಯಿ ಮೊತ್ತದ ಕೊಬ್ಬರಿಯನ್ನು ಖರೀದಿಸಿರುತ್ತೇವೆ. ವಾದಿಯಿಂದ ಒಟ್ಟು 26,19,42,975ರೂಪಾಯಿ ಮೊತ್ತದ ಕೊಬ್ಬರಿ ಖರೀದಿಸಿರುತ್ತೇವೆ ಎಂದರೆ ಸರಿ. ಆ ಬಾಬ್ತು ನಾವು ವಾದಿಗೆ 25,37,91,698ರೂಪಾಯಿಯನ್ನು ಪಾವತಿಸಿರುತ್ತೇವೆ ಎಂದರೆ ಸರಿ. ಬಾಕಿ 81,51,286ರೂಪಾಯಿ ನಮ್ಮಿಂದ ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರಿಗೆ ಕೊಡಬೇಕಾಗಿದ್ದ ಹಣವನ್ನು ಪೂರ್ತಿಯಾಗಿ ಪಾವತಿಸಿರುತ್ತೇವೆ ಯಾವುದೂ ಬಾಕಿ ಇಲ್ಲ ಎನ್ನುತ್ತಾರೆ.

4.ನಮ್ಮ ಲಿಖಿತ ಹೇಳಿಕೆಯಲ್ಲಿ ವಾದಿಯಿಂದ ಖರೀದಿಸಿದ 26,19,42,975ರೂಪಾಯಿ ಕೊಬ್ಬರಿಯಲ್ಲಿ ಸುಮಾರು 37,92,600ರೂಪಾಯಿಯ ಕೊಬ್ಬರಿಯನ್ನು ವಾದಿಗೆ ವಾಪಸ್ ಕಳುಹಿಸಿದ್ದೇವೆ ಎಂದು ಹೇಳಿರುತ್ತೇನೆ ಎನ್ನುವುದು ಸರಿ. ಆ ರೀತಿ ವಾಪಸ್ ಕಳುಹಿಸಿದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ಸದರಿ ದಾಖಲೆ ಯಾವುದು ಎಂದರೆ ಸಾಕ್ಷಿಯು ನಿಡಿ-8 ರಿಂದ 11ನ್ನು ತೋರಿಸುತ್ತಾರೆ. ನಿಡಿ-8ರಲ್ಲಿ ವಾದಿಗೆ ಯಾವ ದಿನಾಂಕದಂದು ಕೊಬ್ಬರಿಯನ್ನು ವಾಪಸ್ ಕಳುಹಿಸಿದ್ದೆಂದು ಡೆಲಿವರಿ ನೋಟ್ ಡೇಟ್ ಎಂದು ಬರೆದಿರುವ ಕಾಲಂ ನಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿಯು 13-5-23 ಎಂದು ವೇಬಿಲ್ ನಂಬರ್ ನ ಮುಂದುಗಡೆ ಕಾಣಿಸಿದ್ದೇವೆ ಅದು ಬಿಟ್ಟರೆ ಬೇರೆ

ಕಡೆ ದಿನಾಂಕ ನಮೂದಿಸಿಲ್ಲ ಎನ್ನುತ್ತಾರೆ. ನಿಡಿ-8ರಲ್ಲಿ ಪ್ರತಿವಾದಿಯ ಸಹಿ ಬಿಟ್ಟರೆ ಅದನ್ನು ವಾದಿ ಸ್ವೀಕರಿಸಿದ ಬಗ್ಗೆ ವಾದಿಯ ಸಹಿ ಇಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ.

5.ಬಾಕಿ ಹಣ ಪಾವತಿಸಬೇಕೆಂದು ದಿನಾಂಕ 15-2-23 ರಂದು ವಾದಿ ಅವರ ಪರ ವಕೀಲರ ಮೂಲಕ ನಮಗೆ ನೋಟೀಸು ಕೊಡಿಸಿದ್ದರು ಎಂದರೆ ಸಾಕ್ಷಿಯು ನಾವು ಅದನ್ನು ಸ್ವೀಕರಿಸಿಲ್ಲ ಎನ್ನುತ್ತಾರೆ. ಮುಂದುವರೆದು ಅದು ನಮಗೆ ಬಂದಿಲ್ಲ ಎನ್ನುತ್ತಾರೆ. ವಾದಿಯು ಕಳುಹಿಸಿದ ನೋಟೀಸನ್ನು ನಾವು ಸ್ವೀಕರಿಸದೆ ನಂತರದ ದಿನಾಂಕದಲ್ಲಿ ನಿಡಿ-8ನ್ನು ನಾವು ಸೃಷ್ಟಿ ಮಾಡಿದ್ದು ಎಂದರೆ ಸಾಕ್ಷಿಯು ಆ ನೋಟೀಸಿನ ಬಗ್ಗೆ ನಮಗೆ ಗೊತ್ತಿಲ್ಲ ಎನ್ನುತ್ತಾರೆ.

6.ನಿಡಿ-9ರಲ್ಲಿ ಯಾವ ವಾಹನದ ಮೂಲಕ ಕೊಬ್ಬರಿಯನ್ನು ವಾಪಸ್ ಕಳುಹಿಸಿದ್ದೇವೆಂದು ಕಾಣಿಸಿಲ್ಲ ಎಂದರೆ ಸಾಕ್ಷಿಯು ವಾಹನದ ನೋಂದಣಿ ಸಂಖ್ಯೆ ಕಾಣಿಸಿದ್ದೇವೆ ಎನ್ನುತ್ತಾರೆ. ಅದರಲ್ಲಿ transporter ಹೆಸರು ಕಾಣಿಸಿಲ್ಲ ಎಂದರೆ ಸಾಕ್ಷಿಯುು ಅದನ್ನು ಸ್ವಂತ ವಾಹನದ ಮಾಲೀಕರಿಂದ ನಾವು ಕಳುಹಿಸಿದ್ದು ಆದ್ದರಿಂದ transporter ಹೆಸರು ಬರುವುದಿಲ್ಲ ಎನ್ನುತ್ತಾರೆ. ನಿಡಿ-9ರಲ್ಲಿ ಅದನ್ನು ತಲುಪಿಸಬೇಕಾದ ವಿಳಾಸ ತಿಪಟೂರು ಎಂದು ಕಾಣಿಸಿದ್ದೇವೆ ಎಂದರೆ ಸರಿ.

7.ನಿಡಿ-8ರಲ್ಲಿ ವಾದಿಯ ವಿಳಾಸ ಗಂಡಸಿ ಹ್ಯಾಂಡ್ ಪೋಸ್ಟ್ ಆರಸೀಕೆರೆ ಎಂದು ಇದೆ ಎಂದರೆ ಸರಿ. ಈ ವಿಳಾಸಕ್ಕೆ ನಾವು ಕೊಬ್ಬರಿಯನ್ನು ವಾಪಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ.

8.ನಿಡಿ-10ರಲ್ಲೂ ಕೂಡ ವಾದಿಯ ಸೀಲು ಸಹಿ ಇಲ್ಲ ಎಂದರೆ ಸಾಕ್ಷಿಯು ಆ ಫ್ರಾಕ್ಟೀಸನ್ನು ನಾವು ಇಟ್ಟುಕೊಂಡಿಲ್ಲ ಎನ್ನುತ್ತಾರೆ. ನಿಡಿ-11 ರಲ್ಲೂ ಕೂಡ ಕೊಬ್ಬರಿಯನ್ನು ತಲುಪಿಸಿರುವ ವಿಳಾಸ ತಿಪಟೂರು ಎಂದು ಇದೆ ಎಂದರೆ ಸಾಕ್ಷಿಯು ವಾದಿಯು ಜಿ ಎಸ್ ಟಿ ಪೋರ್ಟಲ್ ನಲ್ಲಿ ನೀಡಿರುವ ವಿಳಾಸ ಅದು ಆಗಿರುತ್ತದೆ, ಅದು ನಾವು ಆನ್ಲೈನ್ ನಲ್ಲಿ ಜನರೇಟ್ ಮಾಡಿದಾಗ ಆ ವಿಳಾಸ ಬರುತ್ತದೆ ಎನ್ನುತ್ತಾರೆ. ನಿಡಿ-10 ಕೂಡ ಜಿ ಎಸ್ ಟಿ ಜನರೇಟೆಡ್ ಬಿಲ್ ಎಂದರೆ ನಿಜ. ಅದರಲ್ಲಿ ವಾದಿಯ

ವಿಳಾಸ ಗಂಡಸಿ ಹ್ಯಾಂಡ್ ಪೋಸ್ಟ್ ಅರಸೀಕೆರೆ ಎಂದು ಇದೆ ಎಂದರೆ ಸಾಕ್ಷಿಯು ಹೌದು ಅವರು ಹೇಳಿದಂತಹ ವಿಳಾಸವನ್ನು ನಾವು ಬುಕ್ ನಲ್ಲಿ ಬರೆದಿಟ್ಟುಕೊಂಡಿದ್ದೇವೆ ಅದನ್ನು ಅಲ್ಲಿ ಟೈಪ್ ಮಾಡಿರುತ್ತೇವೆ ಎನ್ನುತ್ತಾರೆ. ನಿಡಿ-10ಜಿ ಎಸ್ ಟಿ ಜನರೇಟೆಡ್ ಬಿಲ್ ಅಲ್ಲ ನಾವು ಟೈಪ್ ಮಾಡಿದ ಬಿಲ್ ಎಂದರೆ ಸಾಕ್ಷಿಯು ನಾವು ಬಿಲ್ಲನ್ನು ಟೈಪ್ ಮಾಡಿದಾಗ ಅದು ಪೋರ್ಟಲ್ ಗೆ ಹೋಗಿ ಜನರೇಟ್ ಆಗುತ್ತದೆ ಎನ್ನುತ್ತಾರೆ.

9.ನಮ್ಮ ಲಿಖಿತ ಹೇಳಿಕೆಯಲ್ಲಿ 4,36,246ರೂಪಾಯಿ ಮೌಲ್ಯದ ಪ್ಯಾಕೇಜ್ ಬ್ಯಾಗುಗಳನ್ನು ಸರಬರಾಜು ಮಾಡಿರುತ್ತೇವೆಂದು ಹೇಳಿರುತ್ತೇವೆ ಎಂದರೆ ಸರಿ. ನಿಪಿ-7ರಲ್ಲಿ ದಿನಾಂಕ 20-9-2022ರಂದು 3,62,614ರೂಪಾಯಿಯ ಪ್ಯಾಕೇಜಿಂಗ್ ಬ್ಯಾಗುಗಳ ಮೌಲ್ಯ ಕಡಿತಗೊಳಿಸಿರುತ್ತೇವೆಂದು ಕಾಣಿಸಿರುತ್ತೇವೆಂದರೆ ನಿಜ. 8-11-22ರಲ್ಲಿ ಪ್ಯಾಕೇಜಿಂಗ್ ಬ್ಯಾಗುಗಳ ಮೌಲ್ಯ 73,632ರೂಪಾಯಿ ಕಡಿತಗೊಳಿಸಿರುತ್ತೇವೆಂದು ಕಾಣಿಸಿದ್ದೇವೆ ಎಂದರೆ ನಿಜ. ಆದ್ದರಿಂದ ನಮ್ಮ ಲಿಖಿತ ಹೇಳಿಕೆಯ ಪ್ಯಾರಾ 7 ರಲ್ಲಿ ಕಾಣಿಸಿದ 4,36,246ರೂಪಾಯಿ ಪಾವತಿಯಾಗಿ ಕಡಿತವಾಗಿರುತ್ತದೆ ಎಂದರೆ ನಿಜ.

10.ಹಾಗೆಯೇ ಲಿಖಿತಹೇಳಿಕೆಯ ಪ್ಯಾರಾ 7ರಲ್ಲಿ 2,49,473ರೂಪಾಯಿ ಟಿಡಿಎಸ್ ಬಾಬ್ತು ಕಡಿತಗೊಳಿಸಿರುತ್ತೇವೆಂದು ಕಾಣಿಸಿದ್ದೇವೆ ಎಂದರೆ ಸರಿ. ಸದರಿ ಟಿಡಿಎಸ್ ಹಣವನ್ನು ಯೂರು ಸಾಮಗ್ರಿ ಖರೀದಿ ಮಾಡುತ್ತಾರೋ ಅವರೇ ಪಾವತಿ ಮಾಡಬೇಕು ಎಂದರೆ ಸಾಕ್ಷಿಯು ಹೌದು ಈ ಹಣ ವಾದಿಯ ಆದಾಯ ತೆರಿಗೆಯ ನಮೂನೆ 26(ಎ) ಯಲ್ಲಿ ಕಂಡುಬರುತ್ತದೆ ಅದನ್ನು ಅವರು ಕ್ಲೇಮ್ ಮಾಡಬಹುದು ಆದ್ದರಿಂದ ಕಡಿತಗೊಳಿಸಿರುತ್ತೇವೆ ಎನ್ನುತ್ತಾರೆ. ವಾದಿಯು ಸದರಿ ಹಣವನ್ನು ಕ್ಲೇಮ್ ಮಾಡಿದ್ದಾರೋ ಎಂದರೆ ನಮಗೆ ಗೊತ್ತಿಲ್ಲ, ಅದು ಅವರಿಗೆ ಗೊತ್ತಾಗುತ್ತದೆ ಎನ್ನುತ್ತಾರೆ. ಟಿಡಿಎಸ್ ಹಣವನ್ನು ವಾದಿ ಕ್ಲೇಮ್ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲದಿದ್ದರೂ ಕೂಡ ವಾದಿಗೆ ಬರಬೇಕಾಗಿದ್ದ ಬಾಕಿ ಹಣಕ್ಕೆ ಮ್ಯಾಚ್ ಮಾಡುವ ಸಲುವಾಗಿ ಅದನ್ನು ಕಾಣಿಸಿದ್ದೇವೆ ಎಂದರೆ ಸರಿಯಲ್ಲ.

ನಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿರುವಂತೆ 25,33,55,443ರೂಪಾಯಿಯನ್ನು ಬ್ಯಾಂಕ್ ಖಾತೆ

ಮೂಲಕ ವರ್ಗಾವಣೆ ಮಾಡಿರುತ್ತೇವೆ ಎಂದರೆ ಸರಿ.

11.ಲಿಖಿತ ಹೇಳಿಕೆಯಲ್ಲಿ 40,77,500ರೂಪಾಯಿ ಫ್ರೈಟ್ ಚಾರ್ಜಸ್ ಕೊಟ್ಟಿರುತ್ತೇವೆಂದು ಕಾಣಿಸಿರುತ್ತೇವೆ ಆ ಚಾರ್ಜನ್ನು ಯಾರು ಸಾಮಗ್ರಿ ಖರೀದಿ ಮಾಡುತ್ತಾರೋ ಅವರೇ ಕೊಡಬೇಕು ಎಂದರೆ ಸಾಕ್ಷಿಯು ಮಾರಾಟಗಾರರೇ ಕೊಡಬೇಕು ಎನ್ನುತ್ತಾರೆ. ಅದನ್ನು ಮಾರಾಟಗಾರರೇ ಕೊಡಬೇಕೆನ್ನುವ ಬಗ್ಗೆ ನಮ್ಮಲ್ಲಿ ಯಾವುದೇ ದಾಖಲೆಯಾಗಿದೆಯಾ ಎಂದರೆ ಸಾಕ್ಷಿಯು ಯಾವುದೇ ದಾಖಲೆಯಾಗಿಲ್ಲ ಮೌಖಿಕವಾಗಿ ಆಗಿದೆ ಎನ್ನುತ್ತಾರೆ. ಖರೀದಿದಾರರೇ ಫ್ರೈಟ್ ಚಾರ್ಜಸ್ ಕೊಡಬೇಕು ಮಾರಾಟಗಾರರು ಕೊಡಬೇಕು ಎಂದು ಇಲ್ಲ ಎಂದರೆ ಸಾಕ್ಷಿಯು ಮಾರಾಟಗಾರರು ಮತ್ತು ಖರೀದಿದಾರರ ನಡುವೆ ಮಾತುಕತೆಯಾಗಿ ಅದರಂತೆ ಮಾರಾಟಗಾರರೇ ಪಾವತಿಸಬೇಕು ಎನ್ನುತ್ತಾರೆ.

12.ನಮಗೆ ಕೊಬ್ಬರಿಯನ್ನು ಖರೀದಿಸಿದ ನಂತರ ವಾದಿಯರು ನಿಪಿ-9 ರೀತಿಯ ಬಿಲ್ಲನ್ನು ರೈಸ್ ಮಾಡಿರುತ್ತಾರೆ ಎಂದರೆ ನಿಜ. ಆ ಬಿಲ್ಲನ್ನು ನಮಗೆ ಕಳುಹಿಸಿರುವುದರಿಂದ ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಗೊತ್ತು ಎಂದರೆ ಸರಿ. ಅದರಲ್ಲಿ ಕಾಣಿಸಿರುವ terms and conditions ಬಗ್ಗೆ ನನಗೆ ಗೊತ್ತು. ಅದರಲ್ಲಿ ಶೇಕಡ 20ರಷ್ಟು ಬಡ್ಡಿಯನ್ನು ವಿಧಿಸಲಾಗುವುದು ಮತ್ತು ಸಾಮಗ್ರಿಯನ್ನು ಖರೀದಿದಾರರ ರಿಸ್ಕ್ ನಲ್ಲಿ ಕಳುಹಿಸಿಕೊಡಲಾಗುವುದು ಎಂದು ಕಾಣಿಸಿದೆ ಎಂದರೆ ನಿಜ. ಅದೇ ರೀತಿ We are not responsible for any loss or damaged in transit ಎಂದು ಇದೆ ಎಂದರೆ ಸಾಕ್ಷಿಯು ಹೌದು transport ನಲ್ಲಿ ಮಾತ್ರ ನಮ್ಮ ಜವಾಬ್ದಾರಿ ಎನ್ನುತ್ತಾರೆ.

13.ವಾದಿಯು ನಮಗೆ ಸಾಮಗ್ರಿಯನ್ನು ಕಳುಹಿಸಿದ ನಂತರ ಅದು ನಮಗೆ ತಲುಪಿ ನಾವು ಪರಿಶೀಲಿಸಿದ ನಂತರವೇ ಆ ಸಾಮಗ್ರಿಗಳು ಡ್ಯಾಮೇಜ್ ಆಗಿತ್ತೋ ಇಲ್ಲವೋ ಎಂಬುದು ಗೊತ್ತಾಗುವುದು ಎಂದರೆ ನಿಜ. ಕೊಬ್ಬರಿಯನ್ನು ಖರೀದಿಸುವಾಗ ನಮ್ಮ ಕಡೆಯವರು ವಾದಿಯ ಬಳಿ ಬಂದು ಅವರು ಮಾಲನ್ನು ಪರಿಶೀಲಿಸಿ ಸರಿಯಾಗಿದೆಯಾ ಇಲ್ಲವಾ ಎಂದು ಪರಿಶೀಲಿಸಿಯೇ ಲೋಡ್ ಮಾಡಿಕೊಳ್ಳುವುದು ಎಂದರೆ ಸಾಕ್ಷಿಯು ನಮ್ಮ ಕಡೆಯವರು ಒಬ್ಬರು ಬರುತ್ತಾರೆ ಅವರು ಸ್ವಲ್ಪ

ನೋಡುತ್ತಾರೆ ಅದರಲ್ಲಿ ಚೆನ್ನಾಗಿದೆ ಎಂದು ಕಂಡುಬಂದಾಗ ಅದನ್ನು ಲೋಡ್ ಮಾಡಿ ಎಂದು ಹೇಳುತ್ತಾರೆ ಆದರೆ ಕೊಬ್ಬರಿ ಒಳಗಡೆ ಹೇಗಿತ್ತು ಎನ್ನುವುದು ಆ ಸಮಯದಲ್ಲಿ ಗೊತ್ತಾಗಿರುವುದಿಲ್ಲ ಎನ್ನುತ್ತಾರೆ. ವಾದಿಯಿಂದ ಲೋಡ್ ಮಾಡಿ ಕಳುಹಿಸಿದ ಕೊಬ್ಬರಿ ನಮಗೆ ತಲುಪಲು 3-4 ದಿವಸ ಬೇಕು ಎಂದರೆ ಸಾಕ್ಷಿಯು ಒಮ್ಮೊಮ್ಮೆ 5-7 ದಿವಸಗಳು ಆಗುತ್ತವೆ ಎನ್ನುತ್ತಾರೆ. ವಾದಿಯು ಒಳ್ಳೆ ಗುಣಮಟ್ಟದ ಕೊಬ್ಬರಿಯನ್ನು ನಮಗೆನೀಡಿದ್ದರೂಕೂಡ ನಾವು closed canter ನಲ್ಲಿ ಅದನ್ನು ಲೋಡ್ ಮಾಡಿಕೊಂಡು ಹೋಗಿರುವುದರಿಂದ ಹಾಗೂ ಕೊಬ್ಬರಿ ಹಾಳಾಗುವ ವಸ್ತು ಆಗಿರುವುದರಿಂದ ಅದು ತಲುಪಲು 3-7 ದಿವಸಗಳು ಬೇಕಾಗಿರುವುದರಿಂದ ಕೊಬ್ಬರಿ ಹಾಳಾಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿಯು ಒಳ್ಳೆಯ ಮಾಲನ್ನು ಕಳುಹಿಸಿದ್ದರೆ ಆ ರೀತಿ ಆಗುವುದಿಲ್ಲ, ಕಳುಹಿಸುವಾಗಲೇ ಕಳಪೆ ಮಾಲನ್ನು ಕಳುಹಿಸಿದರೆ ಆ ರೀತಿ ಆಗುತ್ತದೆ ಎನ್ನುತ್ತಾರೆ. ಆ ಕೊಬ್ಬರಿ ಹಾಳಾಗಿದೆ ಎಂದು ನಮಗೆ ಯಾವಾಗ ಗಮನಕ್ಕೆ ಬಂತು ಮತ್ತು ಎಷ್ಟು ದಿವಸಗಳ ನಂತರ ನಾವು ಎಷ್ಟು ಕೊಬ್ಬರಿಯನ್ನು ವಾದಿಗೆ ವಾಪಸ್ ಕಳುಹಿಸಿದೆವು ಎಂದರೆ ಸಾಕ್ಷಿಯು ನಮಗೆ ತಲುಪಿದ 15 ದಿವಸಗಳಲ್ಲಿ ಕೊಬ್ಬರಿ ಹೇಗೆ ಇದೆ ಎಂದು ನಮಗೆ ಗೊತ್ತಾಗಿರುತ್ತದೆ, ಅಷ್ಟರಲ್ಲಿ ವಾದಿಗೆ ತಿಳಿಸಿ ವಾಪಸ್ ಕಳುಹಿಸಿದ್ದೇವೆ ಎನ್ನುತ್ತಾರೆ.

14.ನಮ್ಮ ಮತ್ತು ವಾದಿಯ ನಡುವೆ ಕೊನೆಯದಾಗಿ ವ್ಯವಹಾರ ನಡೆದಿರುವುದು 9-1-2023 ರಂದು ಎಂದರೆ ಸರಿ. ವಾದಿಯರು ಕಳುಹಿಸಿದ ಕೊಬ್ಬರಿ ಡ್ಯಾಮೇಜ್ ಆಗಿದೆ ಎಂದು 9-1-23ಕ್ಕಿಂತ ಮುಂಚೆ ವಾದಿಗೆ ನೋಟೀಸು ಕೊಟ್ಟಿದ್ದೇವಾ ಎಂದರೆ ಸಾಕ್ಷಿಯು ಅವರಿಗೆ ಕರೆ ಮಾಡಿ ಮೌಖಿಕವಾಗಿ ವಿಚಾರ ತಿಳಿಸಿರುತ್ತೇವೆ ಎನ್ನುತ್ತಾರೆ. ದಿನಾಂಕ 4-4-22 ರಿಂದ ನಮ್ಮ ನಡುವೆ ವ್ಯವಹಾರ ಪ್ರಾರಂಭವಾಗಿದ್ದು ಎಂದರೆ ಸರಿ. ಆ ನಂತರದಲ್ಲಿ ವಾದಿಯರು ಎಷ್ಟು ಬಾರಿ ಕಳಪೆ ಕೊಬ್ಬರಿಯನ್ನು ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ನವೆಂಬರ್ 2022 ರಲ್ಲಿ ವಾದಿಯು ಕಳಪೆ ಮಾಲನ್ನು ಕಳುಹಿಸಿದ್ದರು ಆಗ ಪ್ರತಿವಾದಿ ವಾದಿಯಜೊತೆ ಮಾತನಾಡಿ ತಿಳಿಸಿದರು, ನಂತರ ವಾದಿಯು ಮತ್ತೆ ಕೊಬ್ಬರಿಯನ್ನು ಕಳುಹಿಸಿದರು ಅದೂ ಕೂಡ ಕಳಪೆಯದಾಗಿತ್ತು, ನಂತರದಲ್ಲಿ ಅವರ ಜೊತೆ ವ್ಯವಹಾರವನ್ನು ನಿಲ್ಲಿಸಿದೆವು ಎನ್ನುತ್ತಾರೆ. 4-4-22 ರಿಂದ 20-1-23ರವರೆಗೆ ನಮ್ಮ ನಡುವೆ ವ್ಯವಹಾರ

ನಡೆಯಿತು ಆ ವ್ಯವಹಾರದಲ್ಲಿ ನಾವು ಪೂರ್ತಿ ಹಣ ಪಾವತಿಸದೆ ಹಣವನ್ನು ಉಳಿಸಿಕೊಂಡು ಬಂದಿದ್ದು ಅದನ್ನು ಪಾವತಿಸುವಂತೆ ವಾದಿಯು ಕೇಳಿದಾಗ ವಾದಿ ಕಳಪೆ ಕೊಬ್ಬರಿ ಕಳುಹಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ವ್ಯವಹಾರವು ವಾದಿ ಮತ್ತು ಪ್ರತಿವಾದಿ ನಡುವೆ ನಡೆದಿದ್ದರಿಂದ ಎಲ್ಲಾ ವಿಚಾರವು ಪ್ರತಿವಾದಿಗೆ ಗೊತ್ತಿರುತ್ತದೆ ನನಗೆಏನೂ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಅವರು ಬಂದರೆ ಸತ್ಯವಿಚಾರ ಹೊರಬರುತ್ತದೆ ಎಂಬ ಕಾರಣಕ್ಕೋಸ್ಕರ ಅದನ್ನು ಮುಚ್ಚಿಡಲು ನನಗೆ ಅಧಿಕಾರ ಪತ್ರ ಕೊಟ್ಟು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯಲ್ಲಿ ಮಾಹಿತಿಯನ್ನು ಪ್ರತಿವಾದಿಯೇ ಕೊಟ್ಟಿರುತ್ತಾರೆ ನನಗೇನೂ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ಕೊಡುವ ಸಲುವಾಗಿ ನನಗೆ ಅಧಿಕಾರ ಪತ್ರ ಕೊಟ್ಟಿರುವುದು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**